"ನನ್ನ ಗಂಡ ಕರೆದಿದ್ದರು ಹೋಗಿದ್ದೆ. ಈಗ ನಾವಿಬ್ಬರೂ ಒಟ್ಟಾಗಿ ಇಲ್ಲ. ಡೈವೋರ್ಸ್ ನಂತರದ ಹಣಕಾಸು ವ್ಯವಹಾರ ಹಾಗೂ ನನ್ನ ಮಗಳ ಕಸ್ಟಡಿ ವಿಚಾರವಾಗಿ ಮಾತಾಡಲು ಹೋಗಿದ್ದೆ. ಸಾಯಂಕಾಲ ಸುಮಾರು ನಾಲ್ಕು ಗಂಟೆಯಿಂದ ರಾತ್ರಿ ಎಂಟೂವರೆಯ ತನಕ ಅವರ ಜೊತೆಯೇ ಇದ್ದೆ. ಬೇಕಾದರೆ ವಿಚಾರಿಸಬಹುದು."

ಬಾಗಿಲು ದಾಟುತ್ತಿದ್ದಂತೆಯೇ...

"ಸುರೇಶ್ ನೋಟಿಸ್ ಮಾಡಿದೆಯಾ? ನಾವು ಯಾವ ಪ್ರಶ್ನೆ ಕೇಳ್ತೀವಿ ಅಂತಾ ಮೊದಲೇ ತಯಾರಿ ಮಾಡಿಕೊಂಡು ಉತ್ತರಿಸುತ್ತಿದ್ದಳು. ನಿನಗೆ ಆಶ್ಚರ್ಯ ಆಗಲಿಲ್ಲವಾ?"

"ನಿಜ ಸರ್, ನಾನೂ ಇದೇ ಮಾತು ಹೇಳಬೇಕು ಅಂತಿದ್ದೆ. ಅಲ್ಲದೇ ಅವಳು ಮಾತಾಡುವಾಗ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ... ಮುಖದಲ್ಲಿ ಯಾವ ಭಾವನೆಗಳೂ ಇರಲಿಲ್ಲ. ನಿಜವಾಗಲೂ ಸರ್‌ಪ್ರೈಸಿಂಗ್."

"ಮೊದಲು ಇವಳ ಗಂಡನನ್ನು ಭೇಟಿಮಾಡಬೇಕು..."

ಸುರೇಶ ಫೋನ್ ತೆಗೆದು ಆ ವ್ಯಕ್ತಿಗೆ ಕಾಲ್ ಮಾಡಲು ಅನುವಾದ. ಅಷ್ಟರಲ್ಲಿ ಅವರೊಂದಿಗಿದ್ದ ಲೇಡಿ ಕಾನ್‌ಸ್ಟೆಬಲ್, "ಸರ್, ನಾನೂ ಒಂದು ವಿಷಯ ಗಮನಿಸಿದೆ".

ನಾಗೇಶ್‌ನ ಕಿವಿ ಚುರುಕಾದವು.

"ಬಹುಶಃ ನೀವು ಗಂಡಸರು ಇದನ್ನು ಅಬ್ಸರ್ವ್ ಮಾಡಿರುವುದಿಲ್ಲ... ಸಾಮಾನ್ಯವಾಗಿ ಹೆಂಗಸರು ಸೀರೆಯುಟ್ಟರೆ, ತಮ್ಮ ಎಡಗೈಯನ್ನು ಸೀರೆಯ ಸೆರಗಿನೊಳಗೆ ಮುಚ್ಚಿಟ್ಟುಕೊಂಡಿರುತ್ತಾರೆ. ಅದು ಸ್ಟೈಲ್. ಆದರೆ ನಾವು ಇದ್ದ ಅಷ್ಟೂ ಹೊತ್ತೂ ಅವಳು ತನ್ನ ಬಲಗೈಯನ್ನು ಸೀರೆಯೊಳಗೆ ಮುಚ್ಚಿಟ್ಟುಕೊಂಡಿದ್ದಳು."

'ಅಂದರೆ... ಆ ಕೈಗೆ ಏನಾದಾರೂ ಗಾಯ ಆಗಿದೆಯಾ? ಅದನ್ನು ಮುಚ್ಚಿಡಲು ಹೀಗೆ ಮಾಡಿದ್ದಾಳಾ? ಫೋರೆನ್ಸಿಕ್‌ನವರಿಗೆ ಸಿಕ್ಕ ಇನ್ನೊಂದು ರಕ್ತದ ಕಲೆ... ನವಮಿಯ ಆ ಗಾಯದಿಂದ ಸೋರಿದ ರಕ್ತದ್ದಾ?' ನಾಗೇಶ್ ತಲೆಯಲ್ಲಿ ಮತ್ತೆ ಪ್ರಶ್ನಾವಳಿಗಳು ಹುಟ್ಟಿಕೊಂಡವು.

★★★

ಇನ್‌ಸ್ಪೆಕ್ಟರ್ ಸುರೇಶ ಕೊಂಚ ಬೇಸರದ ಮುಖ ಹೊತ್ತು ಬಂದ.

"ಸರ್, ನವಮಿಯ ಗಂಡ ರಾಜೇಶನ ವಿಚಾರಣೆ ಮಾಡಿದೆ. ಅವನ ಸ್ಟೇಟ್‌ಮೆಂಟ್ ಪ್ರಕಾರ ನವಮಿ ಕೊಲೆಯಾದ ದಿನದ ಮಧ್ಯಾಹ್ನ ನಾಲ್ಕು ಗಂಟೆಯಿಂದ ರಾತ್ರಿ ಸುಮಾರು ಎಂಟು ಗಂಟೆಯವರೆಗೂ ಅವನ ಜೊತೆಯೇ ಇದ್ದಳು. ಅವರಿಬ್ಬರ ಮಧ್ಯೆ ಮಗಳ ಕಸ್ಟಡಿಯ ವಿಷಯವಾಗಿ ವಾದ ವಿವಾದ ಆಗಿ, ನಂತರ ರಾಜೇಶ್‌ನ ಲಾಯರ್ ಬಂದು ಇಬ್ಬರನ್ನೂ ಸಮಾಧಾನ ಮಾಡಿ ಕಳುಹಿಸಿದ್ದಾರೆ. ಪರ್ಫೆಕ್ಟ್ ಅಲಬೈ ಸರ್."

ನಾಗೇಶ್ ತನ್ನ ಸೀಟಿನಿಂದ ಎದ್ದು,

"ನವಮಿ ಅಲ್ಲಿಗೆ ಹೋಗಿರಲಿಲ್ಲ... ಕ್ರೈಂ ರಿಪೋರ್ಟ್ ಮಾಡಿದ ಹುಡುಗಿ ನಮ್ಮ ಸಸ್ಪೆಕ್ಟ್ ಲಿಸ್ಟ್‌ನಲ್ಲಿ ಇಲ್ಲ. ಕೊಲೆ ನಡೆದಿರುವ ರೀತಿ ನೋಡಿದರೆ ಯಾರೋ ದ್ವೇಷಕ್ಕಾಗಿಯೋ ಅಥವಾ ಆ ಕ್ಷಣದಲ್ಲಿ ಬಂದ ಕೋಪ ತಾಳಲಾಗದೇ ಕೈಗೆ ಸಿಕ್ಕಿದುದರಲ್ಲಿ ಹೊಡೆದು ಸಾಯಿಸಿರುವಂತಿದೆ. ಮರ್ಡರ್ ವೆಪನ್ ಸಿಕ್ಕಿಲ್ಲ... ಪೋಸ್ಟ್ ಮಾರ್ಟಂ ರಿಪೋರ್ಟ್‌ನಲ್ಲಿ ಮರ್ಡರ್ ವೆಪನ್ ಯಾವುದು ಅಂತ ಕೂಡಾ ಅಸೆಸ್ ಮಾಡಲೂ ಆಗಲಿಲ್ಲ... ಸದ್ಯದ ಪರಿಸ್ಥಿತಿಯಲ್ಲಿ ನಾವು ಒಂದು ಡೆಡ್ ಎಂಡ್‌ಗೆ ಬಂದು ನಿಂತಿದ್ದೇವೆ."

"ಸರ್ ನಾವ್ಯಾಕೆ ನವಮಿಯನ್ನು ಮತ್ತು ಅವಳ ಪತಿಯನ್ನು ಇಲ್ಲಿಗೆ ಕರೆಸಿ ವಿಚಾರಣೆ ಮಾಡಬಾರದು?"